# 2/–ರೂ ಮತ್ತು 5/–ರೂ ಮೌಲ್ಯದ ಕರೆನ್ಸಿ ನೋಟುಗಳು ಮತ್ತು ನಾಣ್ಯಗಳು; ಶಾಸನಬದ್ದ ಚಲಾವಣೆಯಲ್ಲಿರುವ ಹಣ

ನವೆಂಬರ್ 26, 2001

ಕೆಲವು ನಗರಗಳ/ಪಟ್ಟಣಗಳ ಕೆಲವು ಸ್ಥಳಗಳಲ್ಲಿ 2/– ರೂ ಮತ್ತು 5/– ರೂ. ಮೌಲ್ಯದ ನೋಟುಗಳು ಮತ್ತು ನಾಣ್ಯಗಳು ಚಲಾವಣೆಯಲ್ಲಿರುವ ಹಣವಾಗಿಲ್ಲ ಎಂದು ಸೂಚಿಸುವ ಫಲಕಗಳು ಕಂಡು ಬಂದಿವೆ. ಆದರೆ ಈ ರೀತಿಯ ಸೂಚನೆಗೆ ಯಾವುದೇ ಆಧಾರವಿಲ್ಲ ಮತ್ತು ಅವು ದಾರಿತಪ್ಪಿಸುವಂಥವು. 2/–ರೂ. ಮತ್ತು 5/–ರೂ. ನೋಟುಗಳು ಮತ್ತು ನಾಣ್ಯಗಳು ಚಲಾವಣೆಯಲ್ಲಿರುವುದು ಮುಂದುವರಿದಿವೆ ಎಂದು ಭಾರತದ ರಿಸರ್ವ್ ಬ್ಯಾಂಕ್ ಸ್ಪಷ್ಟಪಡಿಸುತ್ತದೆ. ಸಾರ್ವಜನಿಕರು ತಮ್ಮ ವ್ಯಾಪಾರ ವಹಿವಾಟುಗಳಲ್ಲಿ ಈ ನೋಟುಗಳು ಮತ್ತು ನಾಣ್ಯಗಳನ್ನು ಮುಕ್ತವಾಗಿ ಸ್ವೀಕರಿಸಬಹುದು ಮತ್ತು ಬಳಸಬಹುದು. ಮತ್ತು ಅಂಥ ಯಾವುದೇ ಪ್ರಚಾರಕ್ಕೆ ಕಿವಿಗೊಡಬಾರದು.

ಎನ್.ಎಲ್. ರಾವ್

ಸಹಾಯಕ ವ್ಯವಸ್ಥಾಪಕರು

ಪತ್ರಿಕಾ ಪ್ರಕಟಣೆ ಸಂ.: 2001–02/621